ಇ) ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ: ನಗರ ಪ್ರದೇಶದಲ್ಲಿ ಈಗಾಗಲೇ ಶಾಸಕರ ನೇತೃತ್ವದಲ್ಲಿ ಆಶ್ರಯ ಸಮಿತಿಗಳನ್ನು ರಚಿಸಲಾಗಿರುತ್ತದೆ.

ಈ) ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ JNNURM ಕಾರ್ಯಕ್ರಮ ದಡಿಯಲ್ಲಿ BSUP ಮತ್ತು IHSDP ಯೋಜನೆಗಳನ್ನು ಅನುಷ್ಠಾನಗೊಳಿಸ ಲಾಗುತ್ತಿದೆ. IHSDP ಯೋಜನೆಯಡಿ ರಾಜ್ಯದ ವಿವಿಧ 34 ನಗರ/ಪಟ್ಟಣಗಳ 135 ಕೊಳಚೆ ಪ್ರದೇಶಗಳಲ್ಲಿ 17237 ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. BSUP ಯೋಜನೆಯಡಿ ಬೆಂಗಳೂರು ನಗರದಲ್ಲಿ 59 ಕೊಳಚೆ ಪ್ರದೇಶಗಳಲ್ಲಿ 18,180 ಮನೆಗಳ ನಿರ್ಮಾಣ ಹಾಗೂ ಮೈಸೂರು ನಗರದಲ್ಲಿ 72 ಕೊಳಚೆ ಪ್ರದೇಶಗಳಲ್ಲಿ 6,328 ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಕೊಳಚೆ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣ ಮತ್ತು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಒಟ್ಟು 932.52 ಕೋಟಿ ರೂ.ಗಳು ಮಂಜೂರಾಗಿದ್ದು ಈ ಪೈಕಿ 230.51 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಕರ್ನಾಟಕ ಪ್ರವಾಸೋದ್ಯಮ ನಿಗಮಕ್ಕೆ ಸೇರಿದ ಹೋಟೆಲುಗಳು

489 ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಪ್ರವಾಸೋದ್ಯಮ ನಿಗಮಕ್ಕೆ ಸೇರಿದ ಹೋಟೆಲುಗಳೆಷ್ಟು;

ಆ) ಹೋಟೆಲುಗಳನ್ನು ನಿಗಮವೇ ನಡೆಸುತ್ತಿದೆಯೇ; ಅಥವಾ ಖಾಸಗಿಯವರಿಗೆ ನಡೆಸುತ್ತಿರುವ ಹೋಟೆಲುಗಳೆಷ್ಟು;

ಇ) ನಿಗಮದವರು ನಡೆಸುತ್ತಿರುವ ಹೋಟೆಲುಗಳೆಷ್ಟು; ಖಾಸಗಿಯವರು ನಡೆಸುತ್ತಿರುವ ಹೋಟೆಲುಗಳೆಷ್ಟು;

ಈ) ಈ ಖಾಸಗಿಯವರು ನಡೆಸುತ್ತಿರುವ ಹೋಟೆಲುಗಳಿಂದ ನಿಗಮಕ್ಕೆ ಬರುತ್ತಿರುವ ಆದಾಯವೆಷ್ಟು;

ಉ) ಪ್ರವಾಸಿ ತಾಣಗಳಲ್ಲಿರುವ ಈ ಹೋಟೆಲುಗಳು ಪ್ರವಾಸಿಗರ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಲಭ್ಯವಿದೆಯೇ, ಹಾಗಿದ್ದಲ್ಲಿ, ಕಾರಣಗಳೇನು?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ನಿಗಮಕ್ಕೆ ಸೇರಿದ ಹೋಟೆಲುಗಳ ಸಂಖ್ಯೆ 56.

ಆ) 24 ಘಟಕಗಳನ್ನು ನಿಗಮವು ನಡೆಸುತ್ತಿದ್ದು, 21 ಘಟಕಗಳನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ನೀಡಲಾಗಿದೆ.

ಇ) ನಿಗಮವು ನಡೆಸುತ್ತಿರುವ ಹೋಟೆಲುಗಳು 24.

ಖಾಸಗಿಯವರು ನಡೆಸುತ್ತಿರುವ ಹೋಟೆಲುಗಳ ಸಂಖ್ಯೆ 21.

ಉಳಿದ 11 ಘಟಕಗಳನ್ನು ಖಾಸಗೀಕರಣಗೊಳಿಸಲು ಕ್ರಮ ವಹಿಸಲಾಗಿದೆ.

ಈ) ಪ್ರಸ್ತುತ ಖಾಸಗೀಕರಣಗೊಳಿಸಲಾಗಿರುವ ಘಟಕಗಳಿಂದ ವಾರ್ಷಿಕವಾಗಿ ರೂ. 68.95 ಲಕ್ಷ ಆದಾಯ ಬರುತ್ತಿದೆ.

ಉ) ಹೋಟೆಲ್ ದರಗಳನ್ನು ಮಧ್ಯಮ ವರ್ಗದ ಪ್ರವಾಸಿಗರಿಗೆ ನಿಲುಕುವಂತೆ ಈ ಸೌಲಭ್ಯಗಳನ್ನು ನಡೆಸಲಾಗುತ್ತಿದೆ.

ಜೆ.ಎಂ.ಎಫ್.ಸಿ. ಮತ್ತು ದಿವಾನಿ ನ್ಯಾಯಾಲಯ (ಕಿರಿಯ ಶ್ರೇಣಿಯ) ಮಂಜೂರಾತಿ

471 ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) : ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ನಗರಸಭೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರು ಪಟ್ಟಣಕ್ಕೆ ಜೆ.ಎಂ.ಎಫ್.ಸಿ. ಮತ್ತು ದಿವಾನಿ ನ್ಯಾಯಾಲಯ (ಕಿರಿಯ ಶ್ರೇಣಿ) ಮಂಜೂರಾತಿ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ;

ಆ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?